Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮಿ ಲೇಔಟ್,ಬೆಂಗಳೂರು-86,

## ದಿನಾಂಕ:-18-06-2022 ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ:ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್/44/2022-23 ದಿನಾಂಕ:14-06-2022

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ಪಿ. ವಿಶ್ವನಾಥ್ | ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ), ಬಿಬಿಎಂಪಿ, ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67. |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು. |
| 3. | ಶ್ರೀ. ಉದಯ ಶಂಕರ್ | 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. |
| 4. | ಶ್ರೀಮತಿ. ಗೀತಾ ಕೀನಾಲ್ | ವಾರ್ಡ್ ಸಮಿತಿ ಸದಸ್ಯರು. |
| 5. | ಶ್ರೀಮತಿ. ಮಂಜುಳ | ವಾರ್ಡ್ ಸಮಿತಿ ಸದಸ್ಯರು. |
| 6. | ಶ್ರೀ. ಆಕಾಶ್ | ವಾರ್ಡ್ ಸಮಿತಿ ಸದಸ್ಯರು. |
| 7. | ಶ್ರೀ. ಕೆ ಗಂಗಹನುಮಯ್ಯ | ವಾರ್ಡ್ ಸಮಿತಿ ಸದಸ್ಯರು. |
| 8. | ಶ್ರೀ. ಸತೀಶ್ ರಾಮದಾಸ್ | ವಾರ್ಡ್ ನಾಗರೀಕರು. |
| 9. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್-67. |
| 10. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ ಮೇಸ್ತ್ರಿ ಪಶ್ಚಿಮ ವಲಯ. |
| 11. | ಶ್ರೀ. ಗಿರೀಶ್. ಬಿ | ಬೆಂ.ಜ.ಮಂ ಜಲ ಪರೀವಿಕ್ಷಕರು ಎನ್ ಡಬ್ಲ್ಯೂ-1. |
| 12. | ಕುಮಾರಿ. ಪುಷ್ಪ | ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ. |
| 13. | ಶ್ರೀ. ಮಂಜುನಾಥ್ | ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರು. |
| 14. | ಶ್ರೀ. ರಂಜಿತ್ ಕುಮಾರ್ | ವಾರ್ಡ್ ಮಾರ್ಷ್‌ಲ್ ವಾರ್ಡ್-67. |
| 15. | ಶ್ರೀ. ಸಂತೋಶ್ ರಾಜ್ | ಕಿರಿಯ ಆರೋಗ್ಯ ಪರೀವಿಕ್ಷಕರು. ವಾರ್ಡ್-67. |
| 16. | ಶ್ರೀ. ಎನ್ ಶಿವಣ್ಣ | ಪೋಲಿಸ್ ಇನ್ಸ್‌ಪೆಕ್ಟರ್, ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆ. |



ಜ್ಯೋತಿ.ಪ ಮು.ತಿ.ನೋ.

Scanned by CamScanner

| | | |
|---|---|---|
| 17. | ಶ್ರೀ. ಗೋವಿಂದ ರಾಜ್ | ಸಹಾಯಕ ಪೋಲಿಸ್ ಇನ್ಸ್‌ಪೆಕ್ಟರ್, ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆ. |
| 18. | ಶ್ರೀ. ಸಿದ್ದಯ್ಯ | ಪಿ.ಸಿ ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆ. |
| 19. | ಶ್ರೀ. ಮುನಿಸ್ವಾಮಯ್ಯ | ಸಹಾಯಕ ಪೋಲಿಸ್ ಇನ್ಸ್‌ಪೆಕ್ಟರ್, ಮಲ್ಲೇಶ್ವರಂ ಸಂಚಾರಿ ಪೋಲಿಸ್ ಠಾಣೆ. |
| 20. | ಶ್ರೀ. ರಮೇಶ್ | ಸಹಾಯಕ ಪೋಲಿಸ್ ಇನ್ಸ್‌ಪೆಕ್ಟರ್, ಮಹಾಲಕ್ಷ್ಮಿಲೇಔಟ್ ಪೊಲೀಸ್ ಠಾಣೆ. |
| 21. | ಶ್ರೀ. ರಮೇಶ್ ಟಿ.ಎನ್ | ಒಣ ತ್ಯಾಜ್ಯ ಸಂಗ್ರಹಣ ಕೇಂದ್ರ, ಸಂಯೋಜಕರು. |
| 22. | ಸುಬ್ರಮಣ್ಯನಗರ ಪೊಲೀಸ್ ಠಾಣೆ. | ಗೈರು ಹಾಜರಿ. |
| 23. | ಸಹಾಯಕ ಅಭಿಯಂತರರು, ಬೆಂ.ಜ.ಮಂ ಎಸ್.ಡಬ್ಲ್ಯೂ–2 | ಗೈರು ಹಾಜರಿ. |
| 24. | ಸಹಾಯಕ ಅಭಿಯಂತರರು, ಬೆಸ್ಕಂ ಎಸ್–7 ಉಪವಿಭಾಗ | ಗೈರು ಹಾಜರಿ. |
| 25. | ಸಹಾಯಕ ಅಭಿಯಂತರರು, ಬೆಸ್ಕಂ ಎಸ್–1 ಉಪವಿಭಾಗ | ಗೈರು ಹಾಜರಿ. |
| 26. | ಅರಣ್ಯ ಇಲಾಖೆ, ಪಶ್ಚಿಮ ವಲಯ. | ಗೈರು ಹಾಜರಿ. |
| 27. | ಕಂದಾಯ ಪರೀವಿಕ್ಷಕರು, ವಾರ್ಡ್–67 | ಗೈರು ಹಾಜರಿ. |
| 28. | ಪಶು ಸಂಗೋಪನಾ ವಿಭಾಗ | ಗೈರು ಹಾಜರಿ. |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಮೇ ಮಾಹೆಯ ದಿ: 18/06/2022 ರಂದು ಬೆಳೆಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ.ಉದಯ ಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ರಾಜಾಜಿನಗರ 1ನೇ ಆರ್ ಬ್ಲಾಕ್‌ನಲ್ಲಿ 20ನೇ 'ಎ' ಮೈನ್ ಹಾಗು 20ನೇ 'ಬಿ' ಮೈನ್‌ನಲ್ಲಿ ಸಿಸಿ ಕ್ಯಾಮೇರ ಚಾಲ್ತಿಯಲ್ಲಿರುವುದಿಲ್ಲ ಇವುಗಳನ್ನು ಸರಿಪಡಿಸಲು ಹಾಗು ನಿರ್ವಹಣೆ ಮಾಡಲು ಸಭೆಯಲ್ಲಿ ಕೋರಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ ಮೋದಿ ಹಾಸ್ಪಿಟಲ್ ಅಂಡರ್ ಪಾಸ್‌ಗೆ ಹಾಗು ರಾಜಾಜಿನಗರ 1ನೇ ಬ್ಲಾಕ್ ಸಿಗ್ನಲ್‌ಗೆ ಹೊಸದಾಗಿ ಸಿಸಿ ಕ್ಯಾಮೇರಾ ಅಳವಡಿಸಬೇಕು ಇದರಿಂದ ವಾಹನ ಅಪಘಾತಗಳನ್ನು ಹಾಗು ವ್ಹಿಲಿಂಗ್ ಮಾಡುವ ಪುಂಡರನ್ನು ಪೊಲೀಸ್ ಇಲಾಖೆಯವರಿಗೆ ನಿಯಂತ್ರಿಸಲು ಸುಲಭವಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |

ಮು.ತಿ.ನೋ.



Scanned by CamScanner

| | |
|---|---|
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ವಾರ್ಡ್‌ನ ರಾಜಾಜಿನಗರ 1ನೇ ಆರ್ ಬ್ಲಾಕ್‌ನ ಸಂಘದ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ವಾರ್ಡ್‌ನಲ್ಲಿ ಸಿಸಿ ಕ್ಯಾಮೇರಾ ದುರಸ್ತಿ ಹಾಗು ನಿರ್ವಹಣೆ ಮಾಡಲು ಅನುಮೋದನೆ ದೊರೆತಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು ಹಾಗು ವಾರ್ಡ್‌ನ ನಾಗರೀಕರಾದ ಶ್ರೀ ಸತ್ತೀಶ್ ರವರ ದೂರಿಗೆ ಸಂಭಂದಿಸಿದಂತೆ ವಾರ್ಡ್‌ನಲ್ಲಿ ಈಗಾಗಲೇ ಸಿ.ಸಿ.ಟಿ.ವಿ ಅಳವಡಿಸುವ ಕಾಮಗಾರಿಯು ಮುಕ್ತಯವಾಗಿರುತ್ತದೆ ಸದರಿ ಹೊಸ ಜಾಗಕ್ಕೆ ಸಿಸಿ ಕ್ಯಾಮೇರಾ ಅಳವಡಿಸಲು ಹೋಸ ಅನುದಾನ ಬಿಡುಗಡೆಯಾದಾಗ ಪಟ್ಟಿ ತಯಾರಿಸಿ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್–19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್–67 ನಾಗಪುರದಲ್ಲಿ ಕೋವಿಡ್–19ಗೆ ಸಂಭಂಧಿಸಿದಂತೆ ಮಾಹಿತಿಗಳ ವಿವರಣೆ ನೀಡುವಂತೆ ಶ್ರೀ, ಗಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸಭೆಯಲ್ಲಿ ಸೂಚಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್–67 | ಶ್ರೀ, ಗಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ಕಳೆದ ಒಂದು ವಾರದಿಂದ ಇತ್ತೀಚಿನ ದಿನಗಳಲ್ಲಿ ಹೊಸದಾಗಿ 6 ಪ್ರಕರಣಗಳು ಕಂಡುಬಂದಿರುತ್ತದೆ ಮತ್ತು ಯಾವುದೇ ಡೆತ್ ಕೇಸ್‌ಗಳು ಕಂಡುಬಂದಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಕೋವಿಡ್–19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್‌ನ ಮಾರ್ಷಲ್ ಮಾಸ್ಕನ ಬಗ್ಗೆ ಜನರಿಗೆ ಅರಿವು ಮೂಡಿಸಲು ಸೂಚಿಸಿದರು ಮತ್ತು ಕೋವಿಡ್–19ಗೆ ಸಂಭಂಧಿಸಿದಂತೆ ಮುಂಜಾಗ್ರತ ಕ್ರಮ ವಹಿಸಲು ಸೂಚಿಸಿದರು. |
| ಶ್ರೀ. ರಂಜಿತ್ ಕುಮಾರ್<br>ವಾರ್ಡ್ ಮಾರ್ಷ್‌ಲ್<br>ವಾರ್ಡ್–67. | ಮಾನ್ಯ ನೋಡಲ್ ಅಧಿಕಾರಿಯವರು ಸೂಚಿಸಿರುವಂತೆ ಕೋವಿಡ್–19ಗೆ ಸಂಭಂದಿಸಿದಂತೆ ಮಾಸ್ಕನ ಬಗ್ಗೆ ಜನರಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಇರುವ ಎಲ್ಲಾ ರಸ್ತೆ ಗುಂಡಿಗಳನ್ನು ರಸ್ತೆ ಕತ್ತರಿಸಿದ ಭಾಗಗಳನ್ನು ಕೂಡಲೇ ಡಾಂಬರ್ ಮಿಶ್ರಣದಿಂದ ಮುಚ್ಚುವಂತೆ ತಿಳಿಸಿದರು. |
| ಶ್ರೀ. ಗಂಗಹನುಮಯ್ಯ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನಲ್ಲಿ ಮಳೆ ಮತ್ತು ಗಾಳಿಯಿಂದಾಗಿ ಒಣಗಿರುವ ಮರಗಳ ರೆಂಬೆಗಳು ಬೀಳುತ್ತಿವೆ ಹಾಗು ಬೀಳುತ್ತಿರುವ ಮರಗಳನ್ನು ತೆರವುಗೊಳಿಸಲು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಅರಣ್ಯ ಇಲಾಖೆರವರು ಸಭೆಗೆ ಗೈರು ಹಾಜರಾಗಿದ್ದು ದೂರವಾಣಿ ಮುಖೇನ ದೂರನ್ನು ತಿಳಿಸಿ ಕ್ರಮವಹಿಸಲು ಸೂಚಿಸಿದರು. |
| ಶ್ರೀ. ಗಂಗಹನುಮಯ್ಯ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಅಯ್ಯಪ್ಪ ದೇವಾಲಯದ ಹತ್ತಿರ ಬೃಹತ್ ನಿರುಗಾಲುವೆರವರು ಚರಂಡಿ ನಿರ್ಮಿಸುತ್ತಿದ್ದು ರಸ್ತೆಯನ್ನು ತಾತ್ಕಾಲಿಕವಾಗಿ ಮುಚಿದ್ದು ವಾಹನ ಸಂಚಾರಕ್ಕೆ ಬಹಳ ತೊಂದರೆ ಉಂಟಾಗುತ್ತಿದ್ದು ವೇಗವಾಗಿ ಕೆಲಸ ನಿರ್ವಹಿಸಲು ತಿಳಿಸಲು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಗಂಗಹನುಮಯ್ಯ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ವಿದ್ಯಾ ಭಾರತಿ ಶಾಲೆ ಹತ್ತಿರ ಬೃಹತ್ ನಿರುಗಾಲುವೆರವರು ನಿರ್ಮಸಿರುವ ಚರಂಡಿ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರು ಪ್ರಸ್ಥಾಪಿಸಿರುವಂತೆ ಬೃಹತ್ ನಿರುಗಾಲುವೆ ಕಾರ್ಯಪಾಲಕ ಅಭಿಯಂತರರೊಡನೆ ದೂರವಾಣಿ ಮೂಖೇನ ಚರಂಡಿ ನಿರ್ಮಾಣ ಕಾಮಗಾರಿಯನ್ನು ವೇಗವಾಗಿ ಕೆಲಸ ನಿರ್ವಹಿಸಲು ತಿಳಿಸಿದರು ಹಾಗು ವಿದ್ಯಾ ಭಾರತಿ ಶಾಲೆ ಹತ್ತಿರ ಅಪೂರ್ಣವಾಗಿರುವ ಚರಂಡಿ ಕಾಮಗಾರಿಯನ್ನು ವೇಗವಾಗಿ ನಿರ್ವಹಿಸಲು ತಿಳಿಸಿದರು. |
| ಶ್ರೀ. ಮಂಜುನಾಥ್<br>ತೋಟಗಾರಿಕೆ ಇಲಾಖೆ ಮೇಸ್ತ್ರಿ<br>ಪಶ್ಚಿಮ ವಲಯ | ವಾರ್ಡ್‌ನ ವಿಶ್ವೇಶ್ವರಯ್ಯ ಉದ್ಯಾನದ ಮೇಲೆ ಹಾದು ಹೋಗಿರುವ ಎಚ್.ಟಿ ಲೈನ್‌ಗೆ 11ಕೆ.ವಿ ವಿದ್ಯುತ್ ತಂತಿ ಘರ್ಷಣೆಯಾಗಿ ಸ್ಪಾರ್ಕ್ ಆಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |

ಮು.ತಿ.ನೋ.



Scanned by CamScanner

| | |
|---|---|
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ–67 | ವಾರ್ಡ್‌ನ ಬೆಸ್ಕಂ ಸಹಾಯಕ ಅಭಿಯಂತರರು ಎಸ್–7ರವರು ಸಭೆಗೆ ಗೈರು ಹಾಜರಾಗಿದ್ದು ದೂರವಾಣಿ ಮುಖೇನ ದೂರನ್ನು ತಿಳಿಸಿ ತುರ್ತು ಕ್ರಮವಹಿಸಲು ಸೂಚಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ರಾಜಾಜಿನಗರ ಮೆಟ್ರೊ ನಿಲ್ದಾಣದ ಕೆಳಗೆ ಪಾದಚಾರಿಗಳು ರಸ್ತೆ ದಾಟಲು ಬಹಳ ತೊಂದರೆ ಉಂಟಾಗುತ್ತಿರುತ್ತದೆ ಆದ್ದರಿಂದ ರಸ್ತೆಗೆ ತಾಂತ್ರಿಕವಾಗಿ ಹಂಪ್ಸ್ ಅಳವಡಿಸಬೇಕು ಹಾಗು ಪಶ್ಚಿಮ ಕಾರ್ಡ್ ರಸ್ತೆಯ ರಾಜಾಜಿನಗರ ಮೆಟ್ರೊ ನಿಲ್ದಾಣದಿಂದ ನವರಂಗ್ ಮೇಲ್ ಸೇತುವೆವರೆಗು ಡಾಂಬರಿಕರಣ ಮಾಡಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ರಸ್ತೆ ಮೂಲಭೂತ ಸೌಕರ್ಯ ಕಾರ್ಯಪಾಲಕ ಅಭಿಯಂತರರು ಕ್ರಮವಹಿಸಲು ದೂರವಾಣಿ ಮೂಲಕ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕಪ್ಪು ಚುಕ್ಕಿ ಪ್ರದೇಶಗಳನ್ನು ಕಣ್ಣ್‌ಗಾವಲು ಮಾಡಿ ಕಸ ಹಾಕುವವರಿಗೆ ದಂಡ ವಿಧಿಸಲು ಹಾಗು ಸಾರ್ವಜನಿಕರಿಗೆ ಅರಿವು ಮೂಡಿಸಲು ನಿರ್ದೇಶಿಸಲಾಯಿತು ಮುಂದುವರಿಯುತ ಹಸಿ ಹಾಗು ಒಣ ತ್ಯಾಜ್ಯ ಸಂಗ್ರಹಕಾರರು ಮನೆ ಮನೆಯಿಂದ ಸಂಗ್ರಹಿಸುವ ಹಸಿ ತ್ಯಾಜ್ಯವನ್ನು ಅವರ ವತಿಯಿಂದಲೇ ಸಂಸ್ಕರಿಸಿ ನಿರ್ವಹಿಸಲು ಸೂಚಿಸುವುದು ಒಂದು ವೇಳೆ ಅನುಪಯುಕ್ತ ಒಣ ತ್ಯಾಜ್ಯವನ್ನು ರಸ್ತೆಗೆ ಬಿಸಾಡಿದಲ್ಲಿ ಅವರಿಗೆ ದಂಡ ವಿಧಿಸಲು ಸೂಚಿಸಲಾಯಿತು. ಮಾರ್ಷಲ್ ಇಬ್ಬರ ಸಮುಖದಲ್ಲಿ ಇನ್ನು ಹೆಚ್ಚು ನಿಷೇದಿತ ಏಕ ಬಳಕೆ ಪ್ಲಾಸ್ಟಿಕ್ ಬಳಕೆದಾರರ ಅಂಗಡಿಗಳನ್ನು ರೈಡ್ ಮಾಡಿ ದಂಡ ಹಾಕಲು ಸೂಚಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್–67 | ಮಾನ್ಯ ನೋಡಲ್ ಅಧಿಕಾರಿಯವರು ಸೂಚಿಸಿರುವಂತೆ ಏಕ ಬಳಕೆದಾರರ ಅಂಗಡಿಗಳ ಮೇಲೆ ರೈಡ್ ಮಾಡಿ ದಂಡ ಹಾಕಿ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ವಿಶ್ವೇಶ್ವರಯ್ಯ ಉದ್ಯಾನದಲ್ಲಿ ಹಾಗು ಚಿಣ್ಣರ ಧಾಮ ಉದ್ಯಾನದ ಒಳಗೆ ಸಾರ್ವಜನಿಕರು ತಿಂಡಿ ತಿನಿಸುಗಳ ಪ್ಲಾಸ್ಟಿಕ್ ವೇಸ್ಟ್‌ಅನ್ನು ಎಲ್ಲೇಂದರಲ್ಲಿ ಬಿಸಾಡುತ್ತಿದ್ದಾರೆ ಆದ್ದರಿಂದ ಉದ್ಯಾನದಲ್ಲಿ ಒಣ ಕಸ ಜಾಸ್ತಿ ಉತ್ಪತೆಯಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಸಂತೋಶ್ ರಾಜ್<br>ಕಿರಿಯ ಆರೋಗ್ಯ ಪರೀವಿಕ್ಷಕರು.<br>ವಾರ್ಡ್–67. | ವಾರ್ಡ್‌ನ ವಿಶ್ವೇಶ್ವರಯ್ಯ ಉದ್ಯಾನ ಹಾಗು ಚಿಣ್ಣರಧಾಮ ಉದ್ಯಾನದ ಹೊರಗೆ ಫುಟ್ ಪಾತ್ ವ್ಯಾಪಾರಿಗಳಿಗೆ ಉದ್ಯಾನದ ಒಳಗೆ ಪ್ಲಾಸ್ಟಿಕ್ ವೇಸ್ಟ್ ಅವರ ಅಂಗಡಿಗಳಿಂದಲೇ ಉತ್ಪತೆಯಾಗುತ್ತಿರುವುದನ್ನು ತಿಳಿಸಿ ಅವರಿಗೆ ಎಚ್ಚರಿಕೆ ನೀಡುವುದಾಗಿ ಹಾಗು ಅವರ ಅಂಗಡಿಗಳಿಂದ ಉತ್ಪತೆಯಾಗುತ್ತಿರುವ ತ್ಯಾಜ್ಯವನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಿ ನೀಡುವಂತೆ ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ. ಮಂಜುಳ<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಕೇತ್‌ಮಾರನಹಳ್ಳಿಯ ರಸ್ತೆಯಲ್ಲಿ ಗುಂಡಿಯಾಗಿದೆ ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸಭೆಯ ಸದಸ್ಯರು ಸೂಚಿಸಿರುವಂತೆ ವಾರ್ಡ್‌ನ ಸಹಾಯಕ ಅಭಿಯಂತರರು 3 ದಿನಗಳೊಳಗೆ ರಸ್ತೆ ಗುಂಡಿಯನ್ನು ಮುಚ್ಚಿ ಕ್ರಮವಹಿಸಲು ಸಭೆಯಲ್ಲಿ ಸೂಚಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಘನತ್ಯಾಜ್ಯ ನಿರ್ವಹಣೆ ನಿಯಮ 2016ರ ಪ್ರಕಾರ ಕಸವನ್ನು ಮೂಲದಲ್ಲಿಯೇ ವಿಂಗಡಿಸಬೇಕು ಪ್ರತಿ ಮನೆಯಲ್ಲಿಯೂ 3 (ಹಸಿರು, ನೀಲಿ, ಕೆಂಪು) ರೀತಿಯ ಕಸದ ಬುಟ್ಟಿಗಳನ್ನು ಇಟ್ಟರಬೇಕು.<br>ಹಸಿರು ಬುಟ್ಟಿಯಲ್ಲಿ: ಸೊಪ್ಪು, ತರಕಾರಿ, ಹಣ್ಣುಗಳು ಮತ್ತು ಅಡುಗೆ ವೇಸ್ಟ್ (ಗೊಬ್ಬರ ಮಾಡಬಹುದಾದ ವಸ್ತುಗಳು)<br>ನೀಲಿ ಬುಟ್ಟಿಯಲ್ಲಿ: ಕಾಗದಗಳು. ಪ್ಲಾಸ್ಟಿಕ್‌ಗಳು, ಗಾಜುಗಳು, ಎಲೆಕ್ಟ್ರಾನಿಕ್ ವಸ್ತುಗಳು ಹಾಗು ಇತ್ಯಾದಿ. (ಮರುಬಳಕೆ ಮಾಡಬಹುದಾದ ವಸ್ತುಗಳು)<br>ಕೆಂಪು ಬುಟ್ಟಿಯಲ್ಲಿ: ಡೈಪರ್‌ಗಳು, ಬ್ಲೇಡುಗಳು,ಪ್ಯಾಡ್‌ಗಳು, ರಾಸಾಯನಿಕ ವಸ್ತುಗಳು,ಮತ್ತು ಇತ್ಯಾದಿ (ಅಪಾಯಕಾರಿ ತ್ಯಾಜ್ಯಗಳು )<br>ಕಸವನ್ನು ಎಲ್ಲೆಂದರಲ್ಲಿ ಬಿಸಾಡಬಾರದು, ಆಟೋಚಾಲಕರು ಮತ್ತು ಸಹಾಯಕರು ಮನೆ ಬಾಗಲಿಗೆ |

ಪು.ತಿ.ನೋ.



Scanned by CamScanner

| | |
|---|---|
| | ಬಂದಾಗ ಕಸವನ್ನು ಬೇರ್ಪಡಿಸಿ ನೀಡಬೇಕು, ಪ್ಲಾಸ್ಟಿಕ್‌ನ್ನು ಪೂರ್ಣ ಪ್ರಮಾಣದಲ್ಲಿ ಬಳಸಬಾರದು. ಇದು ಆರೋಗ್ಯಕ್ಕೆ ಹಾನಿಕರಾಕ, ಹಸಿಕಸವನ್ನು ಮನೆಯ ಅಂಗಳದಲ್ಲಿಯೇ ಕಾಂಪೋಸ್ಟಿಂಗ್ ಮಾಡಿ ಗಿಡಗಳಿಗೆ ಹಾಕಬೇಕು ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಪಶ್ಚಿಮ ಕಾರ್ಡ್‌ರಸ್ತೆಯಲ್ಲಿ 1ನೇ ಬ್ಲಾಕ್ ರಾಜಾಜಿನಗರ ಇಲ್ಲಿ ನಿರ್ಮಿಸಲಾಗಿರುವ ಸ್ಕೈವಾಕ್ ಅನ್ನು ಕ್ಷಿಪ್ರಗತಿಯಲ್ಲಿ ಕೈಗೊಂಡು ಪೂರ್ಣಗೊಳಿಸಲು ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರರು<br>ವಾರ್ಡ್–67 | ಸಂಬಂಧಿಸಿದ ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರು (ಟಿ.ಇ.ಸಿ) ರವರೊಂದಿಗೆ ದೂರವಾಣಿ ಮೂಲಕ ತಿಳಿಸಿದರು. |

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ ವಾರ್ಡ್ ಕಮಿಟಿ ವಾರ್ಡ್–67 ವಾಟ್ಸ್ ಆಪ್ ಗ್ರೂಪ್ ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಪ್ರತಿಯನ್ನು,

1. ಮಾನ್ಯ ವಲಯ ಉಪಆಯುಕ್ತರು (ಆಡಳಿತ), ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನು ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

Ramy 31/06/21

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು. ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಮು.ತಿ.ನೋ.

Scanned by CamScanner